**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4568/2022**

**ಸಾಕ್ಷಿಗೆ ದಿನಾಂಕ 16.12.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗೇಶ | ಪಿ.ಡಬ್ಲ್ಯೂ–5 |
| ತಂದೆಯ/ಗಂಡನ ಹೆಸರು | : | ಚಿಕ್ಕಣ್ಣ ಚಾರಿ | ಸಿ.ಡಬ್ಲ್ಯೂ– 6 |
| ವಯಸ್ಸು | : | 54 | |
| ಉದ್ಯೋಗ | : | ಚಿನ್ನದ ಕೆಲಸ | |
| ವಾಸಸ್ಥಳ | : | ಸರಗೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿದ್ದ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯು ಅಮಾನತ್ತು ಮಹಜರ್ ಆಗಿದ್ದು ಅದು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಮಾಡಿರುತ್ತೇನೆ ಮತ್ತು ಯಾವ ಉದ್ದೇಶಕ್ಕಾಗಿ ಮಾಡಿರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ನಿಪಿ 4 ರಿಂದ 7 ಪೋಟೋಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಅದರಲ್ಲಿ ತನ್ನನ್ನು ಗುರತಿಸಿಕೊಂಡಿರುತ್ತಾರೆ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 23.09.2021 ರಂದು ಸರಗೂರು ಪೋಲೀಸರು 1 ನೇ ಆರೋಪಿಯವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಅವರ ಮನೆಯಲ್ಲಿ ಕಳ್ಳತನ ವಾಗಿದ್ದ ಚಿನ್ನದ ಆಭರಣಗಳು ಸಿಕ್ಕಿರುತ್ತವೆ ಎಂದರೆ ಸಾಕ್ಷಿಯು ನಾನು ಚಿನ್ನವನ್ನು ಪರೀಕ್ಷೆ ಮಾಡಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಪೋಲೀಸರು ಆ ಸಮಯದಲ್ಲಿ 3 ಅರಳಿರುವ ಚಿನ್ನದಂತಿರುವ ಉಂಗುರ 2 ಗ್ರಾಂ 530 ಮಿಲಿ.2. 3 ಗ್ರಾಂ 30 ಮಿಲಿ ಚಿನ್ನದಂತಿರುವ ಉಂಗುರ 3. 1 ಗ್ರಾಂ 60 ಮಿಲಿ ಬೇಬಿ ಉಂಗುರ. ಮತ್ತು 4. 4 ಗ್ರಾಂ 370 ಮಿಲಿ ತೂಕದ ಚಿನ್ನದಂತಿರುವ ಬೇಬಿ ಉಂಗುರ. 5. 1 ಜೊತೆ ಚಿನ್ನದಂತಿರುವ 5 ಗ್ರಾಂ 370 ಮಿಲಿ ತೂಕ ಇರುವ ಹ್ಯಾಂಗಿಂಗ್ ಇವುಗಳಲ್ಲದರ ಒಟ್ಟು ತೂಕ 12 ಗ್ರಾಂ 470 ಮಿಲಿ. ಸದರಿ ಆಭರಣಗಳನ್ನು ನಾನು ಪರಿಶೀಲಿಸಿ ತೂಕ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 4 ಮತ್ತು 5 ರವರು ಹಾಜರಿದ್ದರು ಎಂದರೆ ಸರಿ. ಪೋಲೀಸರು ಮದ್ಯಾಹ್ಣ 12.15 ರಿಂದ 2 ಗಂಟೆಯವರೆಗೆ ಅಮಾನತ್ತು ಪಂಚನಾಮೆ ಮೂಲಕ ಸದರಿ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಂತರ ಸ್ಥಳದಲ್ಲಿಯೇ ಮಹಜರ್ ನಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಇದೇ ವಿಚಾರವಾಗಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ರೂ.200/– ಗಳ ವೆಚ್ಚದೊಂದಿಗೆ ನೀಡಲಾಯಿತು.**

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ